1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆಃ- 86/2025

ಪ್ರಾಸಾಃ- 1 ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.7.2026

ಮುಂದುವರೆದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ

ಆ ದಿವಸ ನನ್ನ ಗಂಡ ನೀಲಿ ಅಂಗಿ, ಬಿಳಿ ಲುಂಗಿ ಮತ್ತು ಒಳ ಉಡುಪು ಹಾಕಿಕೊಂಡಿದ್ದರು. ಅವುಗಳನ್ನು ತೋರಿಸಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಮಹಜರು ಕಾಲಕ್ಕೆ ಸಂಗ್ರಹಿಸಿದ ರಕ್ತ ಮಾದರಿಯ ಬಗ್ಗೆ ಸೀಲು ಕವರ್ ನ್ನು ಹೊಡೆದು ಅದರಲ್ಲಿದ್ದ ರಕ್ತ ಸಂಗ್ರಹಿಸಿದ್ದ ಹತ್ತಿಯನ್ನು ಮು ಮಾ 1 ಎಂದು ಗುರುತಿಸಲಾಯಿತು.

ಅದೇ ರೀತಿ ಸೀಲು ಕವರ್ ಗಳನ್ನು ತೆರೆದು ಅವುಗಳಲ್ಲಿದ್ದ ಬಟ್ಟೆಗಳನ್ನು ಸಾಕ್ಷಿಗೆ ತೋರಿಸಲಾಗಿ ನೀಲಿ ಬಣ್ಣದ ಅಂಗಿಯನ್ನು ಮು ಮಾ 2 ಎಂದು, ಬಿಳಿ ಬಣ್ಣದ ಬನಿಯನ್‌ನ್ನು ಮು ಮಾ 3 ಎಂದು, ಬಿಳಿ ಬಣ್ಣದ ಲುಂಗಿಯನ್ನು ಮು ಮಾ 4 ಎಂದು, ಒಳ ಚಡ್ಡಿಯನ್ನು ಮು ಮಾ 5 ಎಂದು ಗುರುತಿಸಲಾಯಿತು. ನನ್ನ ಗಂಡನಿಗೆ ಹೊಡೆಯಲು ಉಪಯೋಗಿಸಿದ ಕುಡುಗೋಲನ್ನು ಸಹ ಗುರತಿಸಬಲ್ಲೆ. ಈಗ ಸೀಲನ್ನು ಹರಿದು ಅದರೊಳಗಿದ್ದ ಕುಡುಗೋಲನ್ನು ತೋರಿಸಿದಾಗ ಸಾಕ್ಷಿಯು ಅದನ್ನು ಗುರುತಿಸಿದ್ದಾರೆ. ಅದನ್ನು ಮು ಮಾ 6 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್ ಬಿ ಕೆ / ಎಲ್ ಎ ಡಿ ಸಿ ವಕೀಲರಿಂದಃ

ಈ ದಿವಸ ಡಿ ಎಲ್ ಎಸ್ ಎ ಸಭೆ ಇರುವ ಕಾರಣ ಪಾಟೀ ಸವಾಲಿಗೆ ಸಮಯ ನೀಡಬೇಕು ಎಂದು ಕೋರಿದ್ದರಿಂದ ಹಾಗೂ ಇನ್ನೂ ಹಲವಾರು ಜನ ಪ್ರತ್ಯಕ್ಷ ಸಾಕ್ಷಿ ಇರುವ ಕಾರಣ ಪಾಟೀ ಸವಾಲಿಗೆ ಒಂದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೆ. ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆಃ- 86/2025

ಪ್ರಾಸಾಃ- 2 ಚಾಸಾಃ- 12

| | | |
|---|---|---|
| ಸಾಕ್ಷಿಯ ಹೆಸರು | : | ಹನುಮಂತ |
| ತಂದೆಯ ಹೆಸರು | : | ಲಕ್ಷ್ಮಯ್ಯ |
| ವಯಸ್ಸು | : | 35 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಎತ್ತಿನ ಬೂದಿಹಾಳ್ ಗ್ರಾಮ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.7.2026

ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ಮೃತ ಮಹೇಶ್ ನನ್ನ ತಮ್ಮ. ಚಾಸಾ 1 ಆತನ ಹೆಂಡತಿ. ಚಾಸಾ 10 ಮತ್ತು 14 ನನ್ನ ಅಣ್ಣಂದಿರು. ಚಾಸಾ 13 ನನ್ನ ಹೆಂಡತಿ. ಚಾಸಾ 16 ನನ್ನ ಅಕ್ಕ. ನಾವು ಬೇರೆ ಬೇರೆ ಮನೆಗಳಲ್ಲಿ ವಾಸವಾಗಿದ್ದೇವೆ. ಚಾಸಾ 16 ರವರ ಗಂಡನೇ ಈ ಕೇಸಿನ ಆರೋಪಿ. ಅವರುಗಳು ನಮ್ಮ ಊರಿನಲ್ಲೇ ವಾಸವಾಗಿದ್ದಾರೆ. ಅವರು ನಮ್ಮ ಮನೆಯ ಎದುರುಗಡೆ ವಾಸವಾಗಿದ್ದರು. ನಮ್ಮ ಮನೆಯ ಪಕ್ಕದಲ್ಲಿ ಚಾಸಾ 1 ಮತ್ತು ಆಕೆಯ ಗಂಡ, ಮಕ್ಕಳು ವಾಸವಾಗಿದ್ದರು. ಅವರಿಗೆ ಇಬ್ಬರು ಮಕ್ಕಳು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಹಾಗೂ ಡಿ ಎಲ್ ಎಸ್ ಎ ಸಭೆ ಇದೆ ಎನ್ನುವ ಕಾರಣಕ್ಕೆ ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೆ. ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.